


International Journal of Kannada Research
www.kannadajournal.com

**ISSN: 2454–5813**
IJKR 2024; 10(4): 06-09
© 2024 IJKR
www.kannadajournal.com
Received: 08-07-2024
Accepted: 13-08-2024

**ಶಿವಶಂಕರ ಸಿ.ಎನ್**
ಸಂಶೋಧನಾ ವಿದ್ಯಾರ್ಥಿ
ವಿದ್ಯುನ್ಮಾನ ಮಾಧ್ಯಮ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು, ಕರ್ನಾಟಕ, ಭಾರತ

**ಮಾರ್ಗದರ್ಶಕರು ಡಾ.ಟಿ.ಶ್ರೀಪತಿ**
ಸಹ ಪ್ರಾಧ್ಯಾಪಕರು ವಿದ್ಯುನ್ಮಾನ ಮಾಧ್ಯಮ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಶಿವಶಂಕರ ಸಿ.ಎನ್**
ಸಂಶೋಧನಾ ವಿದ್ಯಾರ್ಥಿ
ವಿದ್ಯುನ್ಮಾನ ಮಾಧ್ಯಮ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು, ಕರ್ನಾಟಕ, ಭಾರತ

# ಕಾದಂಬರಿಯ ಆಧಾರಿತ ಸಿನಿಮಾಗಳು: ವಸ್ತು ವಿಷಯ ವಿಶ್ಲೇಷಣೆ ಕುರಿತು ಒಂದು ಅಧ್ಯಯನ

**ಶಿವಶಂಕರ ಸಿ.ಎನ್, ಮಾರ್ಗದರ್ಶಕರು ಡಾ.ಟಿ.ಶ್ರೀಪತಿ**

**DOI:** https://doi.org/10.22271/24545813.2024.v10.i4a.1035

**ಪೀಠಿಕೆ**

**ಅಧ್ಯಯನದ ಉದ್ದೇಶಗಳು**

1. ಕನ್ನಡದಲ್ಲಿ ಪ್ರಸಿದ್ದಿಯಾದ ಕಾದಂಬರಿ ಆಧಾರಿತ ಸಿನಿಮಾಗಳನ್ನು ತಿಳಿಯಲು.
2. ಕಾದಂಬರಿ ಆಧಾರಿತ ಸಿನಿಮಾಗಳಲ್ಲಿ ವಸ್ತು ವಿಷಯವಿಶ್ಲೇಷಣೆ ಅರಿಯಲು.
3. ಸಾಮಾಜಿಕ ಸಂದೇಶ ಮತ್ತು ಮೌಲ್ಯಗಳನ್ನು ಪ್ರೇಕ್ಷಕರಿಗೆ ಅಥೈಸಲು.

ಇಂದು ಕನ್ನಡ ಸಿನಿಮಾರಂಗ ಅವಸಾನದತ್ತ ಸಾಗುತ್ತಿದೆ. ಕಾರಣ ಇಂದು ಅತೀ ಹೆಚ್ಚು ಸಿನಿಮಾಗಳು ತಯಾರಾಗುತ್ತಿದ್ದು, ಸುಮಾರು ನೂರರಿಂದ ನೂರಿಪ್ಪತ್ತು ಸಿನಿಮಾಗಳು ವರ್ಷಕ್ಕೆ ಬಿಡುಗಡೆಯಾಗುತ್ತಿದ್ದು ಯಶಸ್ಸು ಮಾತ್ರ ಹತ್ತರಿಂದ ಹದಿನೈದು ಚಿತ್ರಕ್ಕೆ ಸೀಮಿತವಾಗುತ್ತಿದೆ. ಅಂದರೆ ಸೋಲಿಗೆ ಮೂಲಕಾರಣ 'ಕಥೆ', ಅಂದರೆ ಸೃಜನಶೀಲ ನಿರ್ದೇಶಕರು, ನಿರ್ಮಾಪಕರೂ ಇದ್ದರೂ ಒಂದೊಳ್ಳೆ ಕಥೆಯನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಎಡುವುತ್ತಿರುವುದು ಮುಖ್ಯ ಕಾರಣ. ಕನ್ನಡ ಸಾಹಿತ್ಯ ಸಂಪತ್ಭರಿತವಾಗಿದ್ದು ಸಿನಿಮಾಗೆ ಕಥೆಗಳನ್ನು ಪೂರೈಸುವುದಕ್ಕೆ ತನ್ನ ಒಡಲಲ್ಲಿ ರಾಶಿ ರಾಶಿ ಉತ್ಕೃಷ್ಟ ಕಥಾಗೊಂಚಲುಗಳನ್ನು ಇರಿಸಿಕೊಂಡಿದೆ. ಅದನ್ನು ಸರಿಯಾಗಿ ಹೊರ ತೆಗೆಯುವಲ್ಲಿ ಓದುಗ ನಿರ್ದೇಶಕರು ಸಂಪೂರ್ಣ ಸೋತಿದ್ದಾರೆ. ಹಾಗಾಗಿ ಮತ್ತದೇ ಪರಭಾಷೆಯನ್ನು ಕನ್ನಡದಲ್ಲಿ ರೀಮೇಕ್ ಮಾಡುವ ಚಾಳಿಗೆ ಬಂದಿದ್ದಾರೆ. ಹಾಗೆ ಹಿಂದಿನ ದಶಕದಲ್ಲಿ ಮೂಡಿ ಬಂದ ಯಶಸ್ವಿ ಸಿನಿಮಾಗಳ ಹೆಸರನ್ನು ಮರು ನಾಮಕರಣ ಮಾಡಿ ಸವಕಲು ಕಥೆಯನ್ನು ಹೊಸೆದು ರುಚಿ ಇಲ್ಲದ ಹೊಸ ಸಿನಿಮಾ ನಿರ್ಮಾಣ ಮಾಡುವಲ್ಲಿ ತಲ್ಲೀನರಾಗಿದ್ದಾರೆ.

ಉದಾ: ಎರಡು ಕನಸು, ಬಂಗಾರದ ಮನುಷ್ಯ, ಧ್ರುವತಾರೆ, ಬಂಧನ,ಗೆಜ್ಜೆ ಪೂಜೆ, ಮಿಂಚಿನ ಓಟ, ಚಕ್ರವ್ಯೂಹ, ಸಂಪತ್ತಿಗೆ ಸವಾಲ್, ಮಯೂರ, ಧೃವತಾರೆ, ಎರಡು ನಕ್ಷತ್ರಗಳು, ಮುಂತಾದವುಗಳು.

ಇದರ ಜೊತೆಗೆ ಡಬ್ಬಿಂಗ್ ಚಿತ್ರದ ಹಾವಳಿಯಿಂದಾಗಿ ಕನ್ನಡ ಚಿತ್ರರಂಗವು ಸೃಜನಶೀಲತೆಯಿಂದ ಬಳಲುವಂತಾಗಿದ್ದು, ಮುಂದೆ ಚಿತ್ರರಂಗ ಬೆಳಗುವಂತೆ ಆಗಲು ಕಥೆ, ಕಾದಂಬರಿಗಳನ್ನು ತಮ್ಮ ಚಿತ್ರಕ್ಕೆ ಅಳವಡಿಸಿ ಉತ್ತಮ ಮನರಂಜನಾ, ಸಾಮಾಜಿಕ ಪರಿಣಾಮವನ್ನುಂಟು ಮಾಡಬಹುದಾದ ಸಿನಿಮಾಗಳನ್ನು ನಿರ್ಮಾಣ ಮಾಡಬಹುದು

ಇತ್ತೀಚೆಗೆ ಕಾಂದಬರಿಯನ್ನು ಆಧರಿಸಿ ಅಲ್ಲೊಂದು ಇಲ್ಲೊಂದು ಎಂಬಂತ್ತೆ ಸಿನಿಮಾ ನಿರ್ಮಾಣವಾಗುತ್ತಿತ್ತು ಚಿತ್ರರಂಗಕ್ಕೆ ಆಮ್ಲಜನಕ ನೀಡಿದಂತೆ ಯಶಸ್ಸು ಕಾಣುತ್ತಿವೆ. ನಾಗತಿಹಳ್ಳಿ ಚಂದ್ರಶೇಖರ್‌ರವರು ದೊಡ್ಡರಿ ವೆಂಕಟಗಿರಿರಾವ್ ಅವರ ಕಾದಂಬರಿಯನ್ನು ಅದೇ ಶೀರ್ಷಿಕೆಯಡಿ 'ಇಷ್ಟಕಾಮ್ಯ' ಸಿನಿಮಾವನ್ನು ನಿರ್ದೇಶಿಸಿದ್ದಾರೆ. ಚಿತ್ರ ಯಶಸ್ವಿಯೂ ಆಯಿತು. ಆದಿತ್ಯ ಚಿಕ್ಕಣ್ಣರ ನಿರ್ದೇಶನದಲ್ಲಿ ಬಿ.ಎಲ್.ವೇಣರವರ ಕಾದಂಬರಿಯನ್ನು ಆಧರಿಸಿ 'ತಿಪ್ಪಜ್ಜಿ ಸರ್ಕಲ್' ಚಿತ್ರವನ್ನು ನಿರ್ದೇಶಿಸಿದರು. ಇದೊಂದು ದೇವದಾಸಿಯ ಸತ್ಯಕಥೆಯನ್ನು ಆಧರಿಸಿದ ಕಾದಂಬರಿ ಮತ್ತು ಸಿನಿಮಾ, 'ಸಿಂಗಾರವ್ವ ಮತ್ತು ಅರಮನೆ' ಕಾದಂಬರಿ ಆಧರಿಸಿ ಟಿ.ಎಸ್.ನಾಗಾಭರಣರು ಸಿಂಗಾರವ್ವ ಸಿನಿಮಾ ನಿರ್ದೇಶಿಸಿದರು. ಯಶಸ್ವಿಯೂ ಆಗಿತ್ತು. ಹೀಗೆ ಮೂರು

ಮತ್ತೊಂದು ಎಂಬ ಬೆರಳೆಣಿಕೆಯಷ್ಟು ಮಾತ್ರವೇ ಸಿನಿಮಾಗಳು ಯಶಸ್ವಿಯಾಗಿದೆ. ಕಥಾವಸ್ತುವಿನ ಆಯ್ಕೆಯಲ್ಲಿ ಕೊರತೆ ಎದ್ದು ಕಾಣುತ್ತಿದೆ. "ಕಥೆ ಅಂದ್ರೆ ಎಂ.ಟಿ.ಆರ್. ಮಸಾಲದೋಸೆ ಸಿಗುವಷ್ಟು ಸುಲಭನಾ... ಎಂದು ರಾಜ್ಕುಮಾರ್ ಉದ್ಧರಿಸಿದ್ದರು. ಈ ಮಾತು ಸದ್ಯದ ಕನ್ನಡ ಚಿತ್ರರಂಗದ ಸ್ಥಿತಿ–ಗತಿಗಳನ್ನ ಬಿಂಬಿಸುವಂತಿದೆ. ಸುಮಾರು ವರ್ಷಗಳ ದೀರ್ಘಾವಧಿ ಇತಿಹಾಸ ಹೊಂದಿದ ಕನ್ನಡ ಸಿನಿಮಾರಂಗವೂ ಮತ್ತೆ ತನ್ನ ಸುವರ್ಣಯುಗಕ್ಕೆ ಮರಳಬೇಕೆಂದರೆ ಕನ್ನಡ ಸಾಹಿತಿಗಳ ಕಥೆ, ಕಾದಂಬರಿ ಮುಂತಾದ ಸಾಹಿತ್ಯ ಪ್ರಕಾರಗಳನ್ನು ತಮ್ಮ ಸಿನಿಮಾಗಳಿಗೆ ಅಳವಡಿಸಿಕೊಳ್ಳಬೇಕು. ಇದೆಲ್ಲದರ ಹಿನ್ನೆಲೆಯಲ್ಲಿ ದಶಕದ ಹಿಂದಿನ ಕನ್ನಡ ಸಿನಿಮಾ ಲೋಕವು ವೈವಿಧ್ಯಮಯ ಉತ್ಕೃಷ್ಟವಾದ ಕಥಾವಸ್ತುವನ್ನು ಕಾದಂಬರಿಗಳ ಮೂಲಕ ಆಯ್ದುಕೊಂಡು ಸಿನಿರಂಗವನ್ನು ಉಜ್ವಲವಾಗಿ ಬೆಳಗಿದರು ಎಂಬುದೇ ಸೋಜಿಗದ ಸಂಗತಿ. ಅಂತಹ ವಿವಿಧ ವೈವಿಧ್ಯಮಯವಾದ ಕಥಾವಸ್ತುಗಳನ್ನು ಆಯ್ದುಕೊಂಡ ಸಿನಿಮಾ ವಸ್ತುಗಳ ಬಗೆಗೆ ಒಂದು ನೋಟ

**ನಾಗರಹಾವು 1972**

ತ.ರಾ.ಸು.ರವರ ಸರ್ಪ ಮತ್ಸರ, ಎರಡು ಹೆಣ್ಣು, ಒಂದು ಗಂಡು ಮತ್ತು ನಾಗರ ಹಾವು ಎಂಬ ಮೂರು ಕಾದಂಬರಿಗಳನ್ನು ಸಮ್ಮಿಳಿಸಿ ಆಧಾರವಾಗಿಟ್ಟುಕೊಂಡು ತಯಾರಿಸಿದ ಸಿನಿಮಾ. ವಿಷ್ಣುವರ್ಧನ್ ನಾಯಕ ನಟರಾಗಿ ಅಭಿನಯಿಸಿದ ಮೊದಲ ಸಿನಿಮಾ ಕಣಗಾಲ್‌ರವರ ನಿರ್ದೇಶನವಿದ್ದು ರಾಜ್ಯ ಪ್ರಶಸ್ತಿಗಳನ್ನು ಪಡೆದುಕೊಂಡು ಹಿಂದಿ, ತೆಲುಗು, ತಮಿಳಿಗೂ ರಿಮೇಕ್ ಆದ ಹೆಗ್ಗಳಿಕೆ ಇದೆ.

ಇತಿಹಾಸ ಪ್ರಸಿದ್ಧ ಚಿತ್ರದುರ್ಗದಲ್ಲಿ ನಡೆಯುವ 'ನಾಗರಹಾವು' ಕಥೆಯ ನಾಯಕ ರಾಮಾಚಾರಿ. ಉಂಡಾಡಿಗುಂಡನಂತೆ ಬೆಳೆದ ರಾಮಾಚಾರಿ, ಚಾಮಯ್ಯ ಮೇಸ್ಟ ನೆಚ್ಚಿನ ಶಿಷ್ಯ ಮಿತ್ರನ ತಂಗಿ ಅಲಮೇಲುವಿನೊಂದಿಗೆ ರಾಮಾಚಾರಿಗೆ ಪ್ರೇಮಾಂಕುರವಾಗುತ್ತದೆ. ಇಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸತೊಡಗುತ್ತಾರೆ. ಆದರೆ ಚಾಮಯ್ಯ ಮೇಸ್ಟರ ಮಾತಿನಿಂದಾಗಿ ಅವನು ತನ್ನ ಪ್ರೀತಿಯನ್ನು ತ್ಯಾಗ ಮಾಡುತ್ತಾನೆ. ತಾನೇ ಮುಂದೆ ನಿಂತು ಬೇರೊಬ್ಬ ವರನೊಂದಿಗೆ ಅಲಮೇಲುವಿನ ಮದುವೆ ಮಾಡಿಸುತ್ತಾನೆ. ಮುಂದೆ ತನ್ನನ್ನು ಪ್ರೇಮಿಸುತ್ತಿದ್ದ ಮಾರ್ಗರೇಟಳನ್ನೇ ರಾಮಾಚಾರಿಯೂ ಪ್ರೀತಿಸುತ್ತಾನೆ. ಮತ್ತೊಮ್ಮೆ ಹಿರಿಯರು ಈ ಮದುವೆಯನ್ನು ವಿರೋಧಿಸುತ್ತಾರೆ. ಅವರಿಗೆ ಮಾತು ಕೊಟ್ಟ ಚಾಮಯ್ಯ ಮೇಷ್ಟು ತಮ್ಮ ಶಿಷ್ಯನಿಗೆ ಈಗಲೂ ಬುದ್ಧಿ ಹೇಳಲು ಮುಂದಾಗುತ್ತಾರೆ. ಆದರೆ ಆ ಹೊತ್ತಿಗೆ ಅಲಮೇಲು ತನ್ನ ಅಯೋಗ್ಯ ಗಂಡನಿಂದಾಗಿ ವೇಶ್ಯಾವೃತ್ತಿಗೆ ಇಳಿದಿದ್ದನ್ನು ಕಣ್ಣಾರೆ ಕಂಡಿದ್ದ ರಾಮಾಚಾರಿ ಮೇಟ್ಟಿಗೆ ತಿರುಗಿ ಬೀಳುತ್ತಾನೆ. "ಒಮ್ಮೆ ನಿಮ್ಮ ಮಾತು ಕೇಳಿದಕ್ಕೆ ಅಲಮೇಲು ಸೂಳೆಯಾದಳು. ಈಗ ಮಾರ್ಗರೇಟ್ ಕೂಡ ಸೂಳೆಯಾಗಬೇಕೆ?' ಎಂದು ರಾಮಾಚಾರಿ ಆವೇಶಭರಿತನಾಗಿ ಚಾಮಯ್ಯ ಮೇಷ್ಟ ಜೊತೆ ಕೊಸರಾಡುವಾಗ ಅವರು ಕಾಲು ಜಾರಿ ಬೆಟ್ಟದಿಂದ ಕೆಳಕ್ಕೆ ಬೀಳುತ್ತಾರೆ. ಕೊನೆಗೆ ರಾಮಾಚಾರಿ ಹಾಗೂ ಮಾರ್ಗರೇಟ್ ಸಹ ಅದೇ ಬೆಟ್ಟದಿಂದ ಹಾರಿ ಪ್ರಾಣತ್ಯಾಗ ಮಾಡುವುದರೊಂದಿಗೆ ಚಿತ್ರ ದುರಂತ ಅಂತ್ಯ ಕಾಣುತ್ತದೆ.

**ಎಡಕಲ್ಲು ಗುಡ್ಡದ ಮೇಲೆ 1973**

ಭಾರತೀಸುತ ಅವರ ಅದೇ ಹೆಸರಿನ ಕಾದಂಬರಿ ಆಧರಿಸಿದ ಸಿನಿಮಾ, ಸ್ವಲ್ಪ ಎಚ್ಚರ ತಪ್ಪಿದರೂ ಮೂರನೇ ದರ್ಜೆಯ ಸಿನಿಮಾ ಆಗುವಂತಹ ಅಪಾಯವಿರುವ ವಿವಾಹೇತರ ಸಂಬಂಧದ ಕಥೆಯನ್ನು ಅತ್ಯಂತ ಸಂಯಮದಿಂದ ಒಂದು ಶ್ರೇಷ್ಠ ಕಲಾಕೃತಿಯನ್ನಾಗಿಸಿದ ಹೆಗ್ಗಳಿಕೆ ಪುಟ್ಟಣ್ಣ ಅವರಿಗೆ ಸಲ್ಲುತ್ತದೆ. ಕೇವಲ 5 ರಿಂದ 6 ಪಾತ್ರಗಳನ್ನಿಟ್ಟುಕೊಂಡು ಕೊಡಗಿನ ಸುಂದರ ಹೊರಾಂಗಣದಲ್ಲಿ ಚಿತ್ರಿತವಾಗಿರುವ ಈ ಚಿತ್ರ ದೃಶ್ಯ ಮಾಧ್ಯಮದಲ್ಲಿ ಹೊಸ ತಿರುವನ್ನು ನೀಡಿತು,

ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ವೇಳೆ ನಡೆದ ಯುದ್ಧದಲ್ಲಿ ಗಾಯಗೊಂಡು ಪುರುಷತ್ವವನ್ನು ಕಳೆದುಕೊಂಡ ಅಧಿಕಾರಿಯೊಬ್ಬ ತನ್ನ ಮನೆಗೆ ಹಿಂದಿರುಗುತ್ತಾನೆ. ಸುಂದರ ಎಸ್ಟೇಟು ಮತ್ತು ಸುಂದರ ಹೆಂಡತಿಯ ಒಡೆಯನಾದ ಆತನ, ಗಂಡನ ನಿರೀಕ್ಷೆಯಲ್ಲಿ ವಿರಹದಿಂದ ಬೇಯುತ್ತಿದ್ದ ಹೆಂಡತಿಯನ್ನು ತೃಪ್ತಿಪಡಿಸಲಾಗದ ಸ್ಥಿತಿಯಲ್ಲಿರುತ್ತಾನೆ. ಇದನ್ನು ತಿಳಿದು ತನ್ನ ಆಸೆಯನ್ನು ಹತ್ತಿಕ್ಕಿ ಬರಿ ಕಾಮವೊಂದೇ ಬದುಕಲ್ಲ ಎಂದು ತಿಳಿದ ಅವನ ಪತ್ನಿ ಚಿತ್ರದ ನಾಯಕಿ ಮನಸ್ಸನ್ನು ನಿಗ್ರಹಿಸಿ ಪತಿಯೇ ಪರದೈವ ಎಂದು ಅವನನ್ನು ಗೌರವಿಸುತ್ತಾಳೆ. ಮುಂದೆ ನೆರೆಯ ಎಸ್ಟೇಟಿನ ಯುವಕ ನಂಜುಂಡ ದಂಪತಿಗಳಿಗೆ ಪರಿಚಯವಾಗಿ ಅವರ ಕುಟುಂಬಕ್ಕೆ ತುಂಬಾ ಹತ್ತಿರವಾಗುತ್ತಾನೆ. ಗಂಡನ ಅನುಪಸ್ಥಿತಿಯಲ್ಲಿ ನಂಜುಂಡನ ಜೊತೆ

ಎಡಕಲ್ಲು ಗುಡ್ಡಕ್ಕೆ ಪಿಕ್ನಿಕ್ ಹೋಗುವ ನಾಯಕಿಯಲ್ಲಿ ಅಲ್ಲಿನ ಸುಂದರ ರಮಣೀಯ ಸ್ಥಳ, ಪಕ್ಕದಲ್ಲೇ ಇರುವ ನಂಜುಂಡನಂತ ನವತರುಣ, ವರ್ಷಗಳಿಂದ ಸುಖ ಕಾಣದ ದೇಹ, ಉನ್ಮಾದವನ್ನು ತುಂಬುತ್ತವೆ. ಅವಳಲ್ಲಿ ಅಂತರ್ಗತವಾಗಿದ್ದ ಕಾಮೋತ್ಕರ್ಷ ಒಮ್ಮೆಲೇ ವಿಜೃಂಭಿಸಿ,

ಆಕೆ ತನಗರಿವಿಲ್ಲದಂತೆಯೇ ನಂಜುಂಡನೊಂದಿಗೆ ಮಿಲನ ಹೊಂದುತ್ತಾಳೆ, ಒಂದು ಕ್ಷಣದಲ್ಲಿ ಮನಸ್ಸು ಸ್ಥಿಮಿತ ಕಳೆದುಕೊಂಡದ್ದಕ್ಕೆ ಆಕೆ ಮುಂದೆ ತುಂಬಾ ಬೆಲೆ ತೆರಬೇಕಾಗಿ ಬರುತ್ತದೆ. ನಂಜುಂಡ ಅವಳನ್ನು ಬ್ಲಾಕ್ ಮೇಲ್ ಮಾಡತೊಡಗುತ್ತಾನೆ. ನಂತರ ಅವಳ ಮನೆಗೆ ಬರುವ ಅವಳ ತಂಗಿಯ ಮೇಲೆ ಕಣ್ಣು ಹಾಕುತ್ತಾನೆ. ಇದನ್ನು ನಾಯಕಿ ಪ್ರತಿರೋಧಿಸುತ್ತಾಳೆ. ಅವಳ ದೌರ್ಬಲ್ಯವನ್ನು ಉಪಯೋಗಿಸಿಕೊಳ್ಳುತ್ತಾ ನಂಜುಂಡ ಅವಳಿಂದ ದೈಹಿಕ ಸುಖ, ತಂಗಿಯಿಂದ ಪ್ರೀತಿಯ ಸುಖ ಕಸಿಯತೊಡಗುತ್ತಾನೆ. ಕೊನೆಗೆ ಎಲ್ಲ ರಹಸ್ಯಗಳೂ ಬಯಲಾಗಿ, ನಾಯಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಈ ಅನೂಹ್ಯ ಘಟನೆಯಿಂದ ವಿಚಲಿತನಾದ ನಂಜುಂಡ ಬೈಕನ್ನು ಓಡಿಸಿಕೊಂಡು ಹೋಗುತ್ತಿರುವಾಗ ಅಪಘಾತವಾಗಿ ಮರಣ ಹೊಂದುತ್ತಾನೆ. ಇದಿಷ್ಟು ಕಥೆ ನೋಡುಗನನ್ನು ಸೋಜಿಗಗೊಳಿಸುತ್ತದೆ.

**ಮಸಣದ ಹೂ 1985**

ತ.ರಾ.ಸು ಅವರ 'ಮಸಣದ ಹೂವು' ಕಾದಂಬರಿಯನ್ನು ಪುಟ್ಟಣ್ಣನವರು ಅದೇ ಹೆಸರಿನಲ್ಲಿ ನಿರ್ದೇಶಿಸಿದ್ದಾರೆ.

ಬೆಂಗಳೂರಿನ ಚಿನ್ನಮ್ಮ ಎಂಬ ವೇಶ್ಯೆ ಕೆಲವಾರು ಹುಡುಗಿಯರನ್ನಿಟ್ಟುಕೊಂಡು ವೇಶ್ಯಾವೃತ್ತಿ ನಡೆಸುತ್ತಿದ್ದಳು. ಆಮೇಲೆ ಆಕೆ ಮತ್ತಷ್ಟು ಹೊಸ ಹುಡುಗಿಯರು ಪ್ರತಿಷ್ಠಿತ ಗಿರಾಕಿಗಳು, ಸುಸಜ್ಜಿತ ಸೌಲಭ್ಯಗಳು ಮೊದಲಾದವುಗಳಿಂದ ದೊಡ್ಡ ಪ್ರಮಾಣದಲ್ಲಿ ವೇಶ್ಯಾವೃತ್ತಿಯನ್ನು ಮುಂದುವರೆಸಿದರು. ಸಿಂಗಾರು ಎಂಬ ಪದವೀಧರ ಬಡತನದಿಂದ ಬೆಂದು ತಾರಾದೇವಿಯೆಂಬ ಮತ್ತೋರ್ವ ವೇಶ್ಯಾವೃತ್ತಿ ನಡೆಸುತ್ತಿದ್ದ ಹೆಂಗಸಿನ ಮನೆಗೆ ಬರುತ್ತಾನೆ. ಸಿಂಗಾರು ಅಲ್ಲಿ ಪಾರ್ವತಿಯೆಂಬ ಅಸಹಾಯಕ ಹೆಣ್ಣು ಮಗಳನ್ನು ಭೇಟಿಯಾಗುತ್ತೇನೆ. ಅಲ್ಲಿ ಪಾರ್ವತಿ ವೇಶ್ಯಾವೃತ್ತಿಗಿಳಿಯಲು ನಿರಾಕರಿಸುತ್ತಾಳೆ. ಒಂದು ದಿನ ತಾರಾದೇವಿಯ ಮನೆಯಲ್ಲಿ ಮಂತ್ರಿಯೊಬ್ಬ ಕುಡಿದ ಅಮಲಿನಲ್ಲಿ ಪಾರ್ವತಿಯ ಮೇಲೆ ಹಲ್ಲೆ ನಡೆಸುತ್ತಾನೆ. ಆಗ ಸಿಂಗಾರು ಮತ್ತು

ಪಾರ್ವತಿ ಅಲ್ಲಿಂದ ಹೊರ ನಡೆಯಲು ಮನಸ್ಸು ಮಾಡುತ್ತಾರೆ. ಆಗ ಸಿಂಗಾರುಗೆ ಆಕೆ ತಾನು ನಾಗ ಎಂಬ ವ್ಯಕ್ತಿಯನ್ನು ಪ್ರೀತಿಸುತ್ತಿರುವುದಾಗಿ ಪಾರ್ವತಿ ಹೇಳುತ್ತಾಳೆ. ಆಗ ಸಿಂಗಾರು ಅವಳಿಗೆ ನಿನ್ನನ್ನು ನಾಗನ ಹತ್ತಿರ ಬಿಡುತ್ತೇನೆಂದು ಹೇಳಿ ಅವಳನ್ನು ಹಳ್ಳಿಗೆ ಕರೆದುಕೊಂಡು ಬರುತ್ತಾನೆ. ಆದರೆ ಅಷ್ಟರಲ್ಲಿ ನಾಗ ಬೊಂಬಾಯಿ ನಗರದಿಂದ ಸಾಕಷ್ಟು ಹಣ ಸಂಪಾದಿಸಿಕೊಂಡು ಯಾಂತ್ರಿಕ ದೋಣಿಯೊಂದರ ಒಡೆಯನಾಗಿರುತ್ತಾನೆ. ಪಾರ್ವತಿ ಆತನಿಗೆ ತನ್ನ ಕಥೆಯನ್ನು ಹೇಳಿ ಮದುವೆಯಾಗುವಂತೆ ಕೋರುತ್ತಾಳೆ. ಆಗ ಹಣದ ಮದದಿಂದ ಬೀಗುತ್ತಿದ್ದ ನಾಗ ಅವಳನ್ನು "ನೀನು ಹಳಸಿದ ಅನ್ನ, ಮಸಣದ ಹೂವು" ಎಂದೆಲ್ಲಾ ನಿಂದಿಸಿ ಅವಳನ್ನು ತಿರಸ್ಕರಿಸುತ್ತಾನೆ. ಅವಳು ಜಿಗುಪ್ಸೆಗೊಂಡು ಬಂಡೆಯ ಮೇಲಿಂದ ಹಾರಿ ಪ್ರಾಣ ಬಿಡುತ್ತಾಳೆ. ಆಗ ಸಿಂಗಾರು ಆಕೆಯ ಅಂತ್ಯಕ್ರಿಯೆ ಮುಗಿಸಿ ಅವಳ ಸಮಾಧಿಯ ಬಳಿ ಕುಳಿತು ದುಃಖಿಸುತ್ತಿದ್ದಾಗ ತಾರಾದೇವಿ ಪಾರ್ವತಿಯನ್ನು ಹುಡುಕಿಕೊಂಡು ಬರುತ್ತಾಳೆ. ಆಗ ಸಿಂಗಾರು ಹಣಕ್ಕಾಗಿ ಪಾರ್ವತಿಯನ್ನು ವೇಶ್ಯೆ ಮಾಡಿದ ಮತ್ತು ತನ್ನನ್ನು ತಲೆ ಹಿಡುಕನನ್ನಾಗಿ ಮಾಡಿದ ತಾರಾದೇವಿ ಮತ್ತು ವ್ಯವಸ್ಥೆಯನ್ನು ನಿಂದಿಸಿ ತಾರಾದೇವಿಯನ್ನು ಕೊಲ್ಲಲು ಹೋಗುತ್ತಾನೆ. ಆಗ ಆಕೆ ಸಮಾಜದಲ್ಲಿ ಬಡತನ, ಹಣದ ದಾಹ, ಕಾಮದ ದಾಹ ಮೊದಲಾದವುಗಳು ಇರುವವರೆಗೂ ನಮ್ಮಂತಹವರು ಸಾಯುವುದಿಲ್ಲ. ಬದುಕುತ್ತೇವೆ ಮತ್ತು ಒಳೆಯುತ್ತಲೇ ಇರುತ್ತೇವೆಂದು ಹೇಳಿ ವಿಕಟವಾಗಿ ನಗುತ್ತಾಳೆ.

**ಚಂದವಳ್ಳಿಯ ತೋಟ 1964**

ತ.ರಾ.ಸು. ಅವರ 'ಚಂದವಳ್ಳಿಯ ತೋಟ' ಕಾದಂಬರಿಯನ್ನು ಅದೇ ಹೆಸರಲ್ಲಿ ಟಿ.ವಿ.ಸಿಂಗ್ ಠಾಕೂರ್‌ರವರು ಸಿನಿಮಾ ನಿರ್ದೇಶಿಸಿದ್ದಾರೆ. ರಾಜ್ ಕುಮಾರ್, ಜಯಂತಿ, ಉದಯಕುಮಾರ್ ನಟಿಸಿದ್ದಾರೆ.

ಚಂದವಳ್ಳಿಯ ತೋಟ ಇಂದಿಗೂ ಸುಂದರ ಕಲಾಕೃತಿ, ನಿರಂತರವಾಗಿ ಕನ್ನಡ ಪ್ರೇಕ್ಷಕನನ್ನು ಕಾಡುತ್ತಾ ಬಂದಿರುವ ಸಿನಿಮಾ. ಮೇಲ್ನೋಟಕ್ಕೆ ಉಪದೇಶ ಮಾಡುವ ಚಿತ್ರದಂತೆ ಕಂಡುಬಂದರೂ ಸಂಸಾರದ ವಿಘಟನೆಯ ದುರಂತವನ್ನು ಭಾವನಾತ್ಮಕವಾಗಿ ಕಟ್ಟಿಕೊಡುವ ಪ್ರಯತ್ನದಂತೆ ಗೋಚರಿಸುತ್ತದೆ. ಗ್ರಾಮ ಬದುಕಿನ ಉದಾತ್ತ ಆದರ್ಶಗಳನ್ನು ವೈಭವೀಕರಿಸುವ ರೀತಿ ಬೋಧನೆಯ ಉದ್ದೇಶದ ಕಥಾನಕವೆಂಬಂತೆ ರೂಪುಗೊಂಡಿದೆ. ಪ್ರಧಾನವಾಗಿ ಇದು ಒಂದು ಊರು ಮತ್ತು ಸಂಸಾರ ಬಿದ್ರಗೊಳ್ಳುವ ಕತೆಯಂತೆ ಕಂಡರೂ 'ಚಂದ್ರವಳ್ಳಿಯ ತೋಟ'ವು ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ನಂತರದ ಆಧುನಿಕ ಮೌಲ್ಯಗಳು ಹಳ್ಳಿಗಳಿಗೆ ಪ್ರವೇಶ ಪಡೆದಾಗ, ಅಲ್ಲಿ ಉಂಟಾದ ಪಲ್ಲಟ, ಸಂಘರ್ಷ ಮತ್ತು ಸ್ಥಿತ್ಯಂತರವನ್ನು ಹೇಳುತ್ತದೆ.

ಚಂದ್ರವಳ್ಳಿಯಲ್ಲಿ ಶಿವನಂಜೇಗೌಡ ಮತ್ತು ಪುಟ್ಟತಾಯಿ ಆದರ್ಶ ದಂಪತಿಗಳು, ಅವರ ಮಕ್ಕಳೇ ಹನುಮ ಮತ್ತು ರಾಮ. ಹನುಮ ಒಳ್ಳೆಯವನಾದರೆ ರಾಮ ಸ್ವಲ್ಪ ದುಡುಕು ಸಭಾವದವನು, ಶಿವನಂಜೇಗೌಡನ ಮೇಲೆ ಅದೇ ಊರಿನ ಕರಿಯಪನಿಗೆ ಹಳೇ ದ್ವೇಷವಿರುತ್ತದೆ ಕರಿಯಪ್ಪ ಶಿವನಂಜೇಗೌಡನ ಮೇಲೆ ಅದೇ ಊರಿನ ಕರಿಯಪ್ಪನಿಗೆ ಹಳೆ ದ್ವೇಷವಿರುತ್ತದೆ. ಕರಿಯಪ್ಪ ಶಿವನಂಜೇಗೌಡನೇ ಊರಲ್ಲಿ ತಂದಿರಿಸಿದ ಭಟ್ಟನ ಜೊತೆ ಸೇರಿ ಗೌಡನ ವಿರುದ್ಧ ಸಂಚು ಮಾಡುತ್ತಾನೆ ಇದಕ್ಕೆ ದಾಳವಾಗಿ ಗೌಡನ ಎರಡನೆಯ ಮಗ ರಾಮನನ್ನು ಬಳಸಿಕೊಳ್ಳುತ್ತಾನೆ. ರಾಮ ತನ್ನ ಹೆಂಡತಿ ಲಕ್ಷ್ಮಿಯ ಜೊತೆಗೂಡಿ ಮನೆಯನ್ನು ಇಬ್ಭಾಗ ಮಾಡುತ್ತಾನೆ. ಇದರಿಂದ ಮನನೊಂದು ಪುಟ್ಟತಾಯಿ ಸಾಯುತ್ತಾಳೆ. ಇಷ್ಟಕ್ಕೆ ಸುಮ್ಮನಾಗದ ರಾಮ, ಹನುಮನ ಮೇಲೆ ಆರೋಪ ಹೊರಿಸಿ ಆತನನ್ನು ಜೈಲಿಗೆ ಕಳುಹಿಸುತ್ತಾನೆ. ರಾಮನ ಹೆಂಡತಿ ಲಕ್ಷ್ಮಿ ಹನುಮನ ಕೊಸಿಗೆ ವಿಷವಿಕ್ಕಿ ಸಾಯಿಸುತ್ತಾಳೆ.

ರೋಷಗೊಂಡ ಹನುಮ ರಾಮನನ್ನು ಕೊಲ್ಲುತ್ತಾನೆ. ಲಕ್ಷ್ಮಿ ನೀರಿಗೆ ಬಿದ್ದು ಸಾಯುಸುತ್ತಾಳೆ. ರೋಷಗೊಂಡ ಹನುಮ ರಾಮನನ್ನು ಕೊಲ್ಲುತ್ತಾನೆ. ಲಕ್ಷ್ಮಿ ನೀರಿಗೆ ಬಿದ್ದು ಸಾಯುತ್ತಾಳೆ. ನ್ಯಾಯಾಲಯ ಹನುಮನಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದನ್ನು ತಿಳಿದ ಹನುಮನ ಹೆಂಡತಿ ಚನ್ನಿ ಆಘಾತದಿಂದ ಸಾಯುತ್ತಾಳೆ. ಈ ಎಲ್ಲಾ ಘಟನೆಗಳಿಂದಾಗಿ ಶಿವನಂಜೇಗೌಡನಿಗೆ ಹುಚ್ಚುಹಿಡಿಯುವುದರೊಂದಿಗೆ ಚಿತ್ರ ದುರಂತ ಅಂತ್ಯ ಕಾಣುತ್ತದೆ. ಒಂದು ಪರಿಸರದೊಳಗೆ ಪ್ರವೇಶ ಪಡೆಯುವ ಹೊಸ ಘಟಕಗಳು ಸೃಷ್ಟಿಸುವ ತಲ್ಲಣ ಮತ್ತು ದುರಂತಗಳನ್ನು ವಿವರಣಾತ್ಮಕವಾಗಿ ಕಟ್ಟಿಕೊಡುವುದೇ 'ಚಂದವಳ್ಳಿಯ ತೋಟ' ಚಿತ್ರದ ವಿಶೇಷತೆ.

**ಬಂಗಾರದ ಮನುಷ್ಯ 1972**

ಟಿ.ಕೆ. ರಾಮರಾವ್‌ರವರ 'ಬಂಗಾರದ ಮನುಷ್ಯ' ಕಾದಂಬರಿಯನ್ನು ಸಿದ್ದಲಿಂಗಯ್ಯ ನವರು ಅದೇ ಹೆಸರಿನಲ್ಲಿ ಸಿನಿಮಾ ರೂಪ ಕೊಟ್ಟಿದ್ದಾರೆ. ಕನ್ನಡದಲ್ಲಿ ಸಾರ್ವಕಾಲಿಕ ದಾಖಲೆ ಬರೆದ ಚಿತ್ರ. ಸತತ ಎರಡು ವರ್ಷ ಪ್ರದರ್ಶನ ಕಂಡ ಹೆಗ್ಗಳಿಕೆ ಇದೆ.

ರಾಜೀವಪ್ಪ ಪಟ್ಟಣದಲ್ಲಿ ಓದಿ ಬೆಳೆದವನು. ತನ್ನ ಭಾವ ಅಕಾಲ ಮರಣಕ್ಕೆ ತುತ್ತಾದಾಗ ಅಕ್ಕನ ಸಂಸಾರವನ್ನು ಜವಾಬ್ದಾರಿ ಹೊರಲು ಪಟ್ಟಣದಿಂದ ಹಳ್ಳಿಗೆ ಬರುತ್ತಾನೆ ರಾಜೀವಪ್ಪ, ಅಲ್ಲಿನ ಪರಿಸ್ಥಿತಿ ಹದಗೆಟ್ಟಿದ್ದರಿಂದ ತಾನೆ ಅಲ್ಲಿ ಉಳಿದು ಅಕ್ಕನ ಸಂಸಾರವನ್ನು ಸರಿ ಮಾಡಲು ನಿರ್ಧರಿಸುತ್ತಾನೆ. ಕುಟುಂಬದ ಆತ್ಮೀಯ. ಊರಿನ ಮುಖಂಡನಾದ ರಾಚುತಪ್ಪನ ಸಹಾಯದಿಂದ ಕುಟುಂಬಕ್ಕೆ ಸೇರಿದ ಜಮೀನನ್ನು ತನ್ನ ಸುಪರ್ದಿಗೆ ತೆಗೆದುಕೊಂಡು ವ್ಯವಸಾಯ ಮಾಡತೊಡಗುತ್ತಾನೆ. ಅಕ್ಕನ ಮಕ್ಕಳಾದ ಕೇಶವ ಮತ್ತು ಚಕ್ರಪಾಣಿಯನ್ನು ಪಟ್ಟಣಕ್ಕೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಾನೆ. ಇಡೀ ಊರಿನ ಜನ ಬಂಜರು ಭೂಮಿಯೆಂದು

ನಿರ್ಲಕ್ಷ್ಯ ತೋರಿದ್ದ ಇಪ್ಪತ್ತೈದು ಎಕರೆ ಭೂಮಿಯನ್ನು ತೆಗೆದುಕೊಂಡು ಬಾವಿ ತೋಡಿಸಿ ಫಲವತ್ತಾದ ಭೂಮಿಯನ್ನಾಗಿ ಮಾಡುತ್ತಾನೆ. ಎದುರು ಮನೆಯ ಲಕ್ಷ್ಮಿಯೊಂದಿಗೆ ರಾಜೀವಪ್ಪನಿಗೆ ಪ್ರೇಮಾಂಕುರವಾಗುತ್ತದೆ. ಅವಳನ್ನು ಮದುವೆಯಾಗಬೇಕೆಂದು ನಿರ್ಧರಿಸುತ್ತಾನೆ. ಆದರೆ ವಿದ್ಯಾಭ್ಯಾಸ ಮುಗಿಸಿಕೊಂಡು ಬರುವ ಅಕ್ಕನ ಮಕ್ಕಳು ರಾಜೀವನ ನಿಯತ್ತಿನ ಮೇಲೆ ಪ್ರಶ್ನೆ ಮಾಡುತ್ತಾರೆ. ಲಕ್ಷ್ಮಿ ಆಕಸ್ಮಿಕವಾಗಿ ಸಾವನ್ನಪ್ಪುತ್ತಾಳೆ. ಇದೆಲ್ಲದರಿಂದ ನೊಂದು ರಾಜೀವಪ್ಪ ಆಸ್ತಿ, ಹಣ ಎಲ್ಲವನ್ನೂ ಅಕ್ಕನ ಮಕ್ಕಳಿಗೆ ಬಿಟ್ಟು ಊರನ್ನೇ ಬಿಟ್ಟು ಹೊರಟುಹೋಗುತ್ತಾನೆ. ಉತ್ತಮ ಕತೆಯಿದ್ದ ಈ ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ. ಹಲವು ದಾಖಲೆಗಳನ್ನು ಬರೆದಿದೆ.

**ಕಾನೂರು ಹೆಗ್ಗಡತಿ 2000**

ರಾಷ್ಟ್ರಕವಿ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೂ ಆದ ಕುವೆಂಪುರವರ ಬೃಹತ್ ಕಾದಂಬರಿ 'ಕಾನೂರು ಸುಬ್ಬಮ್ಮ ಹೆಗ್ಗಡತಿ'ಯನ್ನು ಚಿತ್ರರೂಪಕ್ಕೆ ತರುವ ಬರಹದ ಕೆಲಸಕ್ಕೆ ಮತ್ತೊಬ್ಬ ಜ್ಞಾನಪೀಠ ಪುರಸ್ಕೃತರಾದ. ನಟರೂ ನಾಟಕರಾಗಿ ಪ್ರಸಿದ್ಧಿ ಪಡೆದ ನಿರ್ದೇಶಕ ಗಿರೀಶ್ ಕಾರ್ನಾಡರು ಈ ಕಾರ್ಯವನ್ನು ನೆರವೇರಿಸಿದರು. ಸುಮಾರು ನೂರಕ್ಕೂ ಹೆಚ್ಚು ಪಾತ್ರಗಳಿರುವ ಕಾದಂಬರಿ. ನಾಲ್ಕು ಪಾತ್ರಗಳ ಮೂಲಕ ಕಾದಂಬರಿಯ ಆಶಯವನ್ನು ತೆರೆದಿಡುವ ಪ್ರಯತ್ನವನ್ನು ಕಾರ್ನಾಡರು ಮಾಡಿದರು. "ಸಿನಿಮಾ ಬಿಡುಗಡೆಯಾದ ನಂತರದಲ್ಲಿ ಕಾದಂಬರಿಯ 2000 ಪ್ರತಿಗಳು ಮರುಮುದ್ರಣಗೊಂಡವು.

ಅತ್ಯುತ್ತಮ ಚಿತ್ರಕ್ಕಾಗಿ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಗಳಿಸಿಕೊಂಡಿದೆ. ತಾರಾಗಣದಲ್ಲಿ ಗಿರೀಶ್ ಕಾರ್ನಾಡ್, ತಾರಾ, ಶ್ರೀನಿವಾಸ ಪ್ರಭು, ಸುಚೇಂದ್ರ ಪ್ರಸಾದ್‌ರವರು ನಟಿಸಿದ್ದಾರೆ. ಕನ್ನಡ ಸಿನಿಮಾರಂಗಕ್ಕೆ ಬಹುಖ್ಯಾತಿಯನ್ನು ತಂದು ಕೊಟ್ಟ ಸಿನಿಮಾ 'ಕಾನೂರು ಹೆಗ್ಗಡತಿ'. ಮೂರು ಬೆಳೆದ ಮಕ್ಕಳ ತಂದೆ ಕಾನೂರಿನ ಚಂದ್ರೇಗೌಡ ಸುಬ್ಬಮ್ಮನನ್ನು ಮೂರನೇ ಹೆಂಡತಿಯಾಗಿ ಮನೆಗೆ ಕರೆತರುತ್ತಾನೆ. ಚಂದ್ರೇಗೌಡನ ಮಗ ರಾಮಯ್ಯ ಮತ್ತು ಚಂದ್ರೇಗೌಡನ ಅಣ್ಣನ ಮಗ ಹೂವಯ್ಯ ಮೈಸೂರಲ್ಲಿ ವಿದ್ಯಾಭ್ಯಾಸ ಮಡುತ್ತಿರುತ್ತಾರೆ. ಹೂವಯ್ಯನ ತಂದೆಗೂ ಸೀತಾಳ ತಂದೆಗೂ ತಮ್ಮ ಮಕ್ಕಳನ್ನು ಪರಸ್ಪರ ಮದುವೆ ಮಾಡಿಕೊಳ್ಳುವ ಬಗ್ಗೆ ಮೊದಲೇ ಮಾತುಕತೆಯಾಗಿದ್ದರೂ ಚಂದ್ರೇಗೌಡ ಸೀತಾಳನ್ನು ತನ್ನ ಮಗ ರಾಮಯ್ಯನಿಗೆ ಮದುವೆ ಮಾಡಿಕೊಳ್ಳುವ ಪ್ರಸ್ತಾಪ ಇಟ್ಟಾಗ ಸೀತಾಳ ತಂದೆ ತಾನು ಕೊಟ್ಟ ಹಳೆಯ ಮಾತನ್ನು ನಿರ್ಲಕ್ಷಿಸಿ ಒಪ್ಪುತ್ತಾನೆ. ಚಂದ್ರೇಗೌಡ ಸ್ವಾರ್ಥಿ ದಬ್ಬಾಳಿಕೆಯ ವ್ಯಕ್ತಿತ್ವದವನು. ಜೊತೆಗೆ ಅನುಮಾನದ ಸ್ವಭಾವ ಬೇರೆ. ಹೀಗಾಗಿ ಹೂವಯ್ಯ ಮತ್ತವನ ತಾಯಿ ತನ್ನಲ್ಲಿರುವುದನ್ನು ಸಹಿಸಲಾಗದೆ ತಾನಿನ್ನು ಹೆಚ್ಚು ಓದಿಸುವುದಿಲ್ಲವೆಂದು ಹೂವಯ್ಯನಿಗೆ ಹೇಳುತ್ತಾನೆ. ಮಾತಿಗೆ ಮಾತು ಬೆಳೆದು ಹೂವಯ್ಯ ಮತ್ತು ಹೂವಯ್ಯನ ತಾಯಿಗೆ ಪಾಲು ಕೊಟ್ಟು ಮನೆಯಿಂದ ಹೊರ ಹಾಕುತ್ತಾನೆ. ಇತ್ತ ಸುಬ್ಬಮ್ಮ ಗಂಡನ ದಬ್ಬಾಳಿಕೆಯ ವಿರುದ್ಧ ಅಸಹನೆ ವ್ಯಕ್ತಪಡಿಸಲು ಪ್ರಾರಂಭಿಸುತ್ತಾಳೆ. ಬಸವಿ ಗಂಗಿಗೆ ಒಡವೆಗಳನ್ನು ಕೊಡಲು ಹೋದಾಗ ಸುಬ್ಬಮ್ಮ ಕೆರಳಿ, ಒಡವೆಗಳನ್ನು ಕಿತ್ತುಕೊಂಡು ಗಂಗಿಗೂ ಹೊಡೆದು, ಹೂವಯ್ಯನ ಹತ್ತಿರ ಬಂದು ಅವನ್ನು ಜೋಪಾನವಾಗಿಡುವಂತೆ ಕೋರಿಕೊಳ್ಳುತ್ತಾಳೆ. ಮುಂದೆ ರಾಮಯ್ಯ ಮತ್ತು ಸೀತಾಗೆ ಮದುವೆಯಾಗುತ್ತದೆ. ಆದರೆ ಮದುವೆಯ ದಿನ ಹುಲ್ಲಿನ ಮೆದೆಗೆ ಬೆಂಕಿಗೆ ಬಿದ್ದಿದ್ದರಿಂದ ಮದುವೆಯ ಮನೆಯಲ್ಲಿ ಎಲ್ಲಾ ಅಸ್ತವ್ಯಸ್ತವಾಗುತ್ತದೆ. ಆದರೆ ರಾಮಯ್ಯ ಹೂವಯ್ಯನೇ ಇದನ್ನೆಲ್ಲಾ ಮಾಡಿಸಿದ್ದು ಎಂಬ ತೀರ್ಮಾನಕ್ಕೆ ಬಂದು ಅವನ ಮೇಲೆ ಕಿಡಿಕಾರುತ್ತಾನೆ.

ಚಂದ್ರೇಗೌಡನ ಕೋಪ ಮತ್ತು ದುಡುಕುತನದಿಂದ ಮಗ ರಾಮಯ್ಯನ ಸಂಸಾರ ಹಾಳಾಗುತ್ತದೆ. ಸುಬ್ಬಮ್ಮ ವಾಪಸ್ಸು ತನ್ನ ಮನೆಗೆ ಹೋಗಿಬಿಡುತ್ತಾಳೆ. ಇದೆಲ್ಲದ್ದರಿಂದ ಚಂದ್ರೇಗೌಡ ಖಾಯಿಲೆ ಬೀಳುತ್ತಾನೆ. ರಾಮಯ್ಯ ಖಿನ್ನನಾಗುತ್ತಾನೆ. ಚಂದ್ರೇಗೌಡನ ಖಾಯಿಲೆ ವಿಷಯ ತಿಳಿದ ಮೇಲೆ ಸುಬ್ಬಮ್ಮ ವಾಪಸ್ಸು ಕಾನೂರಿಗೆ ಬರುತ್ತಾಳೆ. ಚಂದ್ರೇಗೌಡ ಸತ್ತ ನಂತರ ವಿಧವೆಯಾದ ಸುಬ್ಬಮ್ಮ ಮನೆಯಲ್ಲೇ ಕೆಲಸ ಮಡುತ್ತಿದ್ದ ಶೇರಗಾರನಿಗೆ ಗರ್ಭಿಣಿಯಾಗುತ್ತಾಳಲ್ಲದೆ, ವಿಷಯ ಎಲ್ಲರಿಗೂ ತಿಳಿಯುತ್ತದೆಂಬ ಭಯದಿಂದ ಸಾಯುತ್ತಾಳೆ. ರಾಮಯ್ಯ ನೇಣು ಹಾಕಿಕೊಳ್ಳುತ್ತಾನೆ. ಇದೆಲ್ಲವನ್ನು ಕಣ್ಣಾರೆ ನೋಡಿದ ಹೂವಯ್ಯ ಎಲ್ಲವನ್ನೂ ಬಿಟ್ಟು ಹೋಗಬೇಕೆಂದು ನಿರ್ಧರಿಸುತ್ತಾನಾದರೂ, ಸೀತೆಗಾಗಿ, ವಾಪಸ್ಸು ಬಂದು ಬಿಡುತ್ತಾನೆ. ಬೃಹತ್ ಕಾದಂಬರಿಯನ್ನು ಉತ್ತಮ ಚಿತ್ರವನ್ನಾಗಿ ಕಟ್ಟಿಕೊಡುವಲ್ಲಿ ನಿರ್ದೇಶಕರು ಗೆದ್ದಿದ್ದಾರೆ.

**ವಂಶವೃಕ್ಷ 1972**

ಎಸ್.ಎಲ್ ಭೈರಪ್ಪನವರ ಕಾದಂಬರಿ ಆಧರಿಸಿದ ಸಿನಿಮಾ. ವಿಮರ್ಶಕರಿಂದ ಪ್ರಶಂಸೆಗಳಿಸಿದ ಸಿನಿಮಾ ಇದಾಗಿದ್ದು ಗಿರೀಶ್ ಕಾರ್ನಾಡ್ ಮತ್ತು ಬಿ.ವಿ.ಕಾರಂತರು ನಿರ್ದೇಶಿಸಿದ್ದಾರೆ. ರಾಜ್ಯ, ರಾಷ್ಟ್ರ ಪ್ರಶಸ್ತಿಗೆ ಭಾಜನವಾಗಿದ್ದು ಗಿರೀಶ್ ಕಾರ್ನಾಡ್, ಎಲ್.ವಿ. ಶಾರದಾ, ವೆಂಕಟರಾವ್ ತಲಗೇರಿ, ವಿಷ್ಣುವರ್ಧನ್ ಮುಂತಾದವರು ಅಭಿನಯಿಸಿದ್ದಾರೆ.

ಶ್ರೀನಿವಾಸ ಶ್ರೋತ್ರಿಗಳು ಬರೇ ವಿದ್ವಾಂಸರಷ್ಟೇ ಅಲ್ಲ, ಕರ್ಮಠರೂ ಆಗಿರುತ್ತಾರೆ. ತಮ್ಮ 'ವಂಶಾವಳಿಯ ಬಗ್ಗೆ ಅಪಾರ ಗೌರವ ಹೊಂದಿರುತ್ತಾರೆ. ಇವರ ಮಗನಾದ ನಂಜುಂಡ ಶ್ರೋತ್ರಿ ಅಕಾಲ ಮರಣಕ್ಕೀಡಾಗುತ್ತಾನೆ. ಆತನ ಚಿಕ್ಕ ವಯಸ್ಸಿನ ಹೆಂಡತಿ ಕಾತ್ಯಾಯನಿ ವಿಧವೆಯಾಗುತ್ತಾಳೆ. ಗಂಡನ ಮರಣಾನಂತರ ಆತನ ಆಸೆಯಂತೆ ಕಾತ್ಯಾಯನಿ ವಿದ್ಯಾಭ್ಯಾಸ ಮುಂದುವರೆಸಲು ಆಸಕ್ತಳಾದಾಗ ಅತ್ತೆ ಒಪ್ಪುವುದಿಲ್ಲ ಆದರೆ ಶ್ರೀನಿವಾಸ ಶ್ರೋತ್ರಿಗಳು ಒಪ್ಪಿ ಆಕೆಯನ್ನು ಕಾಲೇಜಿಗೆ ಕಳಿಸುತ್ತಾರೆ ಅಲ್ಲಿ ಇಂಗ್ಲೀಷನ ಅಧ್ಯಾಪಕ ಕಾತ್ಯಾಯನಿಗೆ ಪರಿಚಯವಾಗಿ ಇಬ್ಬರಲ್ಲೂ ಪ್ರೀತಿ ಹುಟ್ಟುತ್ತದೆ. ಇಬ್ಬರು ಮದುವೆಯಾಗಬೇಕೆಂದು ಯೋಚಿಸಿದಾಗ ಎಲ್ಲರೂ ಇದನ್ನು ವಿರೋಧಿಸುತ್ತಾರೆ. ಶ್ರೋತ್ರಿಗಳಂತು ಕೆಂಡಾಮಂಡಲವಾಗುತ್ತಾರೆ. ಇತ್ತ ಮದುವೆಯಾದ ಮೇಲೆ ಕಾತ್ಯಾಯನಿಗೆ ಗರ್ಭ ನಿಲ್ಲುವುದಿಲ್ಲವಾದ್ದರಿಂದ ಆಕೆಗೆ ತನ್ನ ಮೊದಲ ಮಗ ಚೀನಿಯ ಬಗ್ಗೆ ಪ್ರೀತಿ ಇಮ್ಮಡಿಯಗುತ್ತದೆ. ಆದರೆ ತಾಯಿಯ ಪ್ರೇಮವನ್ನನುಭವಿಸದ ಚೀನಿಯ ಬಗ್ಗೆ ಪ್ರೀತಿ ಇಮ್ಮಡಿಯಾಗುತ್ತದೆ. ಆದರೆ ತಾಯಿಯ ಪ್ರೇಮವನ್ನನುಭವಿಸದ ಚೀನಿ ತಾಯಿಯನ್ನು ನಿರಾಕರಿಸುತ್ತಾನೆ. ಇದರಿಂದ ಕಾತ್ಯಾಯಿನ ಮನಸ್ಸಿಗೆ ಆಘಾತವಾಗುತ್ತದೆ. ಇತ್ತ ತಮ್ಮ ವಂಶದ ಬಗ್ಗೆ ತುಂಬಾ ಹೆಮ್ಮೆ ಹೊಂದಿದ್ದ ಶ್ರೀನಿವಾಸ ಶ್ರೋತ್ರಿಯವರು ತಮ್ಮ ತಂದೆಯ ವರ್ಷದ ದಿನ ಸಂದರ್ಭವಶಾತ್ ಮನೆಯ ಉಪ್ಪರಿಗೆಯಲ್ಲಿ ಸಿಗುವ ಕೆಲವು ವಸ್ತುಗಳನ್ನು ಕಂಡಾಗ, ಮನೆ ಕೆಲಸದವಳನ್ನು ಪ್ರಶ್ನಿಸುತ್ತಾರೆ. ಆಗ ಅವರಿಗೆ ತಮ್ಮ ಹುಟ್ಟೇ ಆ ವಂಶದಲ್ಲಿ ಆಗಿಲ್ಲವೆಂಬ ಘೋರ ಸತ್ಯವೊಂದು ಅರಿವಿಗೆ ಬರುತ್ತದೆ. ಮರುದಿನ ಶ್ರಾದ್ಧ ಮಾಡುವಾಗ ಇದೆಲ್ಲಾ ನೆನಪಾಗಿ ಹೃದಯಾಘಾತವಾಗಿ ನೆಲ ಕ್ಕೂರಗುತ್ತಾರೆ ಚಿತ್ರ ಉತ್ತಮ ಸಾಮಾಜಿಕ ಸಂದೇಶವನ್ನು ನೀಡುತ್ತದೆ.

ಈ ಮೇಲಿನ ಸಿನಿಮಾಗಳೆಲ್ಲಾ ಉತ್ತಮ ಸಾಮಾಜಿಕ, ಕೌಟುಂಬಿಕ, ವೈಚಾರಿಕ, ವೈಜ್ಞಾನಿಕ, ಸ್ವಾತಂತ್ರ್ಯ ಮುಂತಾದ ವಿಷಯ ವಸ್ತುಗಳನ್ನು ಆಧರಿಸಿದಂತ ಸಿನಿಮಾಗಳಾಗಿ ಮೂಡಿಬಂದಿದ್ದು ಇಂದಿಗೂ ಪ್ರಸ್ತುತವೆನಿಸುತ್ತವೆ. ದುರ್ಬಲಗೊಳ್ಳುತ್ತಿರುವ ಇಂದಿನ ಸಾಮಾಜಿಕ ಸ್ಥಿತಿಗತಿಗೆ ಉತ್ತಮ ಸಂದೇಶಗಳನ್ನು ನೀಡುವಲ್ಲಿ ಕಾದಂಬರಿ ಆಧಾರಿತ ಸಿನಿಮಾಗಳು ಯಶಸ್ವಿಯಾಗಿದ್ದು ಇಂತಹುದೇ ಸಾಮಾಜಿಕ ಮೌಲ್ಯಗಳಿರುವ ಅನೇಕ ಕಾದಂಬರಿ, ಕಥೆಗಳು ಕನ್ನಡ ಸಾಹಿತ್ಯದಲ್ಲಿ ಹೇರಳವಾಗಿದ್ದು ಚಿತ್ರನಿರ್ಮಾಪಕರು, ನಿರ್ದೇಶಕರು ಕಾದಂಬರಿ ಕಥಾವಸ್ತುಗಳೆಡೆಗೆ ಗಮನವನ್ನು ಹರಿಸಿದರೆ ಇನ್ನಷ್ಟು ಉತ್ತಮವಾದ ಚಿತ್ರಗಳನ್ನು ನೀಡಬಹುದು.

**ಗ್ರಂಥಗಳು**


1. ನಾಗರಹಾವು ತರಾಸು
2. ಬಂಗಾರದ ಮನುಷ್ಯ ಅ.ನಾ. ಪ್ರಹ್ಲಾದ ರಾವ್
3. ಎಡಕಲ್ಲು ಗುಡ್ಡದ ಮೇಲೆ ಭಾರತೀ ಸುತ
4. ಮಸಣದ ಹೂ ತರಾಸು
5. ಕಾನೂರು ಹೆಗ್ಗಡತಿ ಕುವೆಂಪು
6. ಸಿನಿಮಾಯೆ ಬಿ.ಎಸ್. ವೆಂಕಟೇಶ ರಾವ್
7. ಬಂಗಾರದ ಮನುಷ್ಯ ಸಿದ್ದಲಿಂಗಯ್ಯ
8. ಕಲಾವಿದರ ಕಥಾನಕ ಕಗ್ಗೆರೆ ಪ್ರಕಾಶ್
9. ಚಂದವಳ್ಳಿಯ ತೋಟ ತರಾಸು
10. ಚಿತ್ರ–ವಿಚಿತ್ರ ರವೀಂದ್ರ ವಂಶಿ